"ದೊಡ್ಡದಾಗಿ ಏನೂ ಇಲ್ಲ. ರಾತ್ರಿ ಹತ್ತು ಗಂಟೆಗೆ ಟ್ರೈನ್. ಅಷ್ಟರಲ್ಲಿ ಎರಡು ಕೆಲಸಕ್ಕೆ ಬಾರದ ಫ್ರೆಂಡ್ಸ್‌ನ್ನು ನೋಡಬೇಕು, ಅಷ್ಟೇ."

ಮನಸ್ಸಿನಲ್ಲಿ ರಿಕ್ಟರ್ ಮಾಪಕದಲ್ಲಿ ಕಂಪನ ಹೆಚ್ಚಾಗುವುದನ್ನು ಕಂಡುಕೊಂಡೆ.

"ಇಫ್ ಯೂ ಡೋಂಟ್ ಮೈಂಡ್... ನನ್ನ ಜತೆ ಕಾರಿನಲ್ಲಿ ಬನ್ನಿ. ನನಗೆ ಒಂದು ಕೆಲಸ ಇದೆ. ಅದನ್ನ ಮುಗಿಸಿ ಕಾಫೀ ಪುಡಿಯನ್ನಾದರೂ ಕೊಡಿಸ್ತೀನಿ."

ಹೇಗೋ ಹೇಳಿಬಿಟ್ಟೆ. ಎಪಿಸೆಂಟರ್ ಬಲವಾಯಿತು. ಅಲಾರಾಮ್ ಸಹ ಕಾಣೆಯಾಯಿತು. ಹತ್ತು ಸೆಕೆಂಡ್ ಕೂಡ ಯೋಚಿಸಲಿಲ್ಲ ಅವನು.

"ವಿತ್ ಪ್ಲಷರ್" ಎಂದ.

ಕಾರನ್ನು ಹೋಟೆಲ್ ಸಿಬ್ಬಂದಿ ತಂದು ಪೋರ್ಟಿಕೋದಲ್ಲಿ ನಿಲ್ಲಿಸಿದ.

"ಡ್ರೈವರ್ ಇಲ್ಲವೇನ್ರೀ?"

ಮುಖದಲ್ಲಿ ಕಲರವ ಕಂಡಿತು.

"ಇಲ್ಲ ಸೆಲ್ಫ್ ಡ್ರೈವ್."

"ನಾನು ಓಡಿಸಲೇ?"

"ಯಾಕೆ?"

"ಇಲ್ಲಾ... ಸರಿ... ನೀವೇ ಓಡಿಸಿ..." ಎಂದು ಎಳೆದ. ಆದರೆ ಅದಕ್ಕಿಂತ ಹೆಚ್ಚಾಗಿ ಏನೂ ಮಾತನಾಡದೇ ಮುಂದಿನ ಸೀಟಿನಲ್ಲಿ ಕುಳಿತುಕೊಂಡ.

"ಎಷ್ಟು ವರ್ಷದಿಂದ ಕಾರು ಓಡಿಸುತ್ತಿದ್ದೀರಾ ?"

"ಡ್ಯಾಶ್‌ಬೋರ್ಡ್ ತೆಗೀರಿ."

"ಅದರಲ್ಲಿ ನೋಡಿದರೆ ಗೊತ್ತಾಗುತ್ತಾ?"

"ಹೌದು, ಡ್ರೈವಿಂಗ್ ಲೈಸೆನ್ಸ್ ಅದರಲ್ಲೇ ಇದೆ."

"ಒಂದು ಅಂದಾಜಿನಲ್ಲಿ ಹೇಳಿ, ಪ್ರೂಫ್ ಎಲ್ಲಾ ಬೇಡಾ..."

"ಆರು ವರ್ಷದಿಂದ."

"ಓಕೇ. ತಪ್ಪು ತಿಳಿಯಬೇಡಿ. ಲೇಡೀಸ್ ಕಾರು ಓಡಿಸುವಾಗ ನಾನು ಪಕ್ಕದಲ್ಲಿ ಕೂತಿಲ್ಲ."

"ಇದರಿಂದ ಏನು ಪ್ರೂವ್ ಮಾಡೋದಿಕ್ಕೆ ಹೊರಟಿದ್ದೀರಾ?"

"ನನಗೆ ಹೆದರಿಕೆಯಾಗ್ತಿದೆ ಅಂತ."

"ದಟ್ ಈಸ್ ಫನ್ನಿ. ಯೂ ಆರ್ ಶಾವನಿಸ್ಟಿಕ್"

"ಎಷ್ಟು ಸುಲಭವಾಗಿ ನಿಮ್ಮಿಂದ ಈ ಪದವನ್ನ ನಮ್ಮ ಮೇಲೆ ಎಸಿಯೋದಿಕ್ಕೆ ಆಗುತ್ತಲ್ಲಾ? ಇದನ್ನೇ ತಮಿಳಿನಲ್ಲಿ ಹೇಳಿ ನೋಡಿ. ಆ ಮಾತಿನ ಪವರ್ ಅರ್ಥವಾಗುತ್ತೆ."

"ಐ ಆಮ್ ಸಾರಿ, ಆದರೆ, ನೀವು ಮಾತನಾಡಿದ್ದು ಹಾಗೆಯೇ ಇತ್ತು. ಹೆದರದೇ ಕುಳಿತುಕೊಳ್ಳಿ. ನಿಮ್ಮ ಟ್ರೈನ್ ಟಿಕೆಟ್ ವೇಸ್ಟ್ ಆಗೋದಿಲ್ಲ."

"ವ್..."

ಇವನ ಬಗ್ಗೆ ಏನು ಗೊತ್ತು? ಸುಂದರವಾಗಿ ನಗ್ತಾನೆ, ಲೊಡ ಲೊಡ ಅಂತ ಮಾತಾಡ್ತಾನೆ, ಕಾಫೀ ಬಗ್ಗೆ ಏನೇನೋ ತಿಳ್ಕೊಂಡಿದ್ದಾನೆ, ಒಳ್ಳೇ ಡ್ರೆಸ್ಸಿಂಗ್ ಸೆನ್ಸ್ ಇರೋ, ಕಾರು ಓಡಿಸೋದಿಕ್ಕೆ ಗೊತ್ತಿರೋ, ಲ್ಯಾಪ್‌ಟಾಪ್ ಇಟ್ಟಿರೋ ಯಾವುದೋ ಒಬ್ಬ ಬಿಸಿನೆಸ್‌ಮನ್. ಇಷ್ಟೇ ಸಾಕೇ ಒಬ್ಬನನ್ನು ಕಾರಿನಲ್ಲಿ ಹತ್ತಿಸಿಕೊಂಡು ಹೋಗಲು? ಮಂಕುದಿಣ್ಣೆಗಳನ್ನೇ ಹೆಚ್ಚಾಗಿ ನೋಡಿದ್ದವಳಿಗೆ